**ಈ ಸಾಕ್ಷಿಯನ್ನು ದಿನಾಂಕಃ 09.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

ಜಬೀ ಪಾಷ ನನ್ನ ಯಜಮಾನರು. ನನಗೆ ಮದುವೆ ಆಗಿ 4 ವರ್ಷ ಆಗಿದೆ . ಜಬೀ ಪಾಷ ನನ್ನ ಗಂಡ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಆಧಾರ ಕಾರ್ಡ ಹಾಜರು ಪಡಿಸಿದ್ದೇನೆ. ನನ್ನ ಆಧಾರ ಕಾರ್ಡ ನಲ್ಲಿ ಕೇರ್ ಆಫ್ ಜಬೀ ಪಾಷ ಎಂದು ನಮೂದು ಆಗಿದೆ ಎಂದರೆ ಸರಿ. ಆಧಾರ ಕಾರ್ಡ ಹೊರತು ಪಡಿಸಿ ನನ್ನ ಬಳಿ ಜಬೀ ಪಾಷ ಹೆಂಡತಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ಪೋಲಿಸ್ ದಾಖಲಾತಿಗಳಲ್ಲಿ ಎಲ್ಲೂ ಜಬೀ ಪಾಷ ಅವರಿಗೆ ಮದುವೆ ಆಗಿದೆ ಮತ್ತು ಅವರಿಗೆ ಹೆಂಡತಿ ಮತ್ತು ಮಗು ಇರುವ ಬಗ್ಗೆ ನಮೂದು ಆಗಿಲ್ಲ ಎಂದರೆ ಸರಿ. ನನ್ನ ಮಗುವಿನ ಆಧಾರ ಕಾರ್ಡ ಅಲ್ಲಿ ಕೂಡ D/o ಜಬೀ ಪಾಷ ಎಂದು ಇಲ್ಲ ಕೇರ್ ಆಫ್ ಜಬೀ ಪಾಷ ಎಂದು ಇದೆ ಎಂದರೆ ಸರಿ. ನಾನು ಜಬೀ ಪಾಷ ರವರ ಹೆಂಡತಿ ಅಲ್ಲ ಮತ್ತು ನನ್ನ ಮಗ ಮಹಮ್ಮದ್ ಉಮೇರಾ ಜಬೀ ಪಾಷ ಅವರ ಮಗ ಅಲ್ಲ ಮತ್ತು ಜಬೀ ಪಾಷ ಅವರಿಗೆ ಮದುವೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಜಬೀ ಪಾಷ ಅವರ ಹೆಂಡತಿ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಬಹುದು. ನನ್ನ ಯಜಮಾನರು ಅಜರ್ ಪಾಷ ರವರ ಬಳಿ ಕೆಲಸ ಮಾಡುತ್ತಿದ್ದರು. ಅಜರ್ ಪಾಷ ಲಾರಿಯ ಮಾಲಿಕರಿರುತ್ತಾರೆ. ಲಾರಿ ಸಂಖ್ಯೆ KA-01-AD-9050 ಇರುತ್ತದೆ . ನಾನು ಅಜರ್ ಪಾಷ ಲಾರಿಯ ಮಾಲೀಕ ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆದರೆ ಯಾವ ದಾಖಲೆ ಕೊಟ್ಟಿದ್ದೇನೆ ಎಂದು ನನಗೆ ಹೇಳಲಾಗುವುದಿಲ್ಲ. ಅಜರ್ ಪಾಷ ರವರ ಮನೆ ಕೊಳ್ಳೇಗಾಲ ದಲ್ಲಿದೆ. ಅಜರ್ ಪಾಷ ರವರ ಬಳಿ ನಮ್ಮ ಯಜಮಾನರು 12 ವರ್ಷದಿಂದ ಲಾರಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದರು. ನನ್ನ ಮುಖ್ಯ ವಿಚಾರಣೆಯ ವಿಚಾರವನ್ನು ನಾನೇ ಹೇಳಿ ಬರೆಸಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನನ್ನ ಯಜಮಾನರು 6 ತಿಂಗಳಿಂದ ಅಜರ್ ಪಾಷ ರವರ ಬಳಿ ಕೆಲಸ ಮಾಡುತ್ತಿದ್ದರು ಎಂದು ಬರೆಸಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಅರ್ಜಿಯಲ್ಲಿ 12 ವರ್ಷದಿಂದ ನನ್ನ ಯಜಮಾನರು ಅಜರ್ ಪಾಷ ರವರ ಬಳಿ ಕೆಲಸ ಮಾಡುತ್ತಿದ್ದರು ಎಂದು ಬರೆಸಲು ತೊಂದರೆ ಇರಲಿಲ್ಲ. ನನ್ನ ಯಜಮಾನರು ಲಾರಿ ಚಾಲಕರಾಗಿದ್ದರು ಎಂದು ತೋರಿಸುವ ಬಗ್ಗೆ ಚಾಲನಾ ಪರವಾಣಗಿ ಹಾಜರು ಪಡಿಸಲು ತೊಂದರೆ ಇಲ್ಲ. ಜಬೀ ಪಾಷ ರವರ ಚಾಲನಾ ಪರವಾಣಗಿ ಯನ್ನು ನಿಆರ್ -1 ಎಂದು ಗುರುತಿಸಲಾಯಿತು. ನನ್ನ ಯಜಮಾನರು 12 ಚಕ್ರ ಇರುವ ವಾಹನ ಓಡಿಸುತ್ತಿದ್ದರು. ನಿಆರ್ -1 ರ ಪ್ರಕಾರ ನನ್ನ ಯಜಮಾನರಿಗೆ ಲಾರಿ ಓಡಿಸಲು ಅಧಿಕೃತ ಪರವಾಣಗಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಯಜಮಾನರು ಓಡಿಸುತ್ತಿದ್ದ ವಾಹನ ಸರಕು ಸಾಗಾಟನೆ ಮಾಡುವ ವಾಹನ ಎಂದರೆ ಸರಿ. ನನ್ನ ಯಜಮಾನರಿಗೆ 4 ಚಕ್ರ ದ ವಾಹನವನ್ನು ಚಲಾಯಿಸಲು ಮಾತ್ರ ಪರವಾಣಗಿ ಇತ್ತು ಲಾರಿ ಚಲಾಯಿಸಲು ಪರವಾಣಗಿ ಇರಲಿಲ್ಲ ಎಂದರೆ ಸರಿ. ನನ್ನ ಯಜಮಾನರಿಗೆ ಲಾರಿ ಓಡಿಸಲು ಚಾಲನಾ ಪರವಾಣಗಿ ಇಲ್ಲದಿದ್ದ

ಕಾರಣ 1 ನೇ ಎದುರುದಾರರು ಪರಿಹಾರ ನೀಡಲು ಭಾಧ್ಯರು , 2 ನೇ ಎದುರುದಾರರು ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ನನಗೆ ಅದರ ಬಗ್ಗೆ ಹೇಲಾಗುವುದಿಲ್ಲ ಎಂದು ಉತ್ತರಿಸುತ್ತಾರೆ . ನನ್ನ ಯಜಮಾನರಿಗೆ 1 ನೇ ಎದುರುದಾರರು ಎಷ್ಟು ಸಂಬಳ ಕೊಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿಲ್ಲ. ಜಬೀ ಪಾಷ ರವರು ಒಂದು ದಿನ ಮಾತ್ರ 1 ನೇ ಎದುರುದಾರರ ಲಾರಿಯನ್ನು ತಮಿಳುನಾಡಿಗೆ ತೆಗೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. 1 ನೇ ಎದುರುದಾರರ ಬಳಿ 12 ವರ್ಷದಿಂದ ನನ್ನ ಯಜಮಾನರು ಕೆಲಸ ಮಾಡುತ್ತಿದ್ದರು ಎಂದು ತೋರಿಸುವ ಬಗ್ಗೆ ನಾನು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ಜಬೀ ಪಾಷ ರವರ ಅಣ್ಣ ತಮ್ಮಂದಿರ ಪಡಿತರ ಚೀಟಿಯನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ನನ್ನ ಯಜಮಾನರು ಮತತು 1 ನೇ ಎದುರುದಾರರ ಮಧ್ಯೆ ಯಾವುದೇ ಮಾಲಿಕ –ನೌಕರರ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣ 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧರಲ್ಲ ಎಂದರೆ ಸರಿಯಲ್ಲ.

**ಎದುರುದಾರರ ಪರ ವಕೀಲರ ಕೋರಿಕೆಯ ಪಾಟೀ ಸವಾಲನ್ನು ಮುಂದೂಡಲಾಯಿತು.**

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ,
ಓ ಹೇ ಕೇ ಸರಿ ಇದೆ,

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.